ಫಲವಿದು ಬಾಳ್ದುದಕೆ ‖ ಪ ‖
ಸಿರಿ ನಿಲಯನ ಗುಣಗಳ ತಿಳಿದು ಭಜಿಸುವುದೆ ‖ ಅ.ಪ. ‖

ಸ್ವೋಚಿತ ಕರ್ಮಗಳಾಚರಿಸುತ ಬಹು
ನೀಚರಲ್ಲಿಗೆ ಪೋಗಿ ಯೊಚಿಸದೆ
ಖೇಚರವಾಹ ಚರಾಚರ ಬಂಧಕ
ಮೋಚಕನಹುದೆಂದ್ಯೋಚಿಸುತಿಪ್ಪುದೆ ‖ 1 ‖

ನಿಚ್ಚ ಸುಭಕುತಿಯಲಚ್ಯುತನಂಘ್ರಿಗ
ಳರ್ಚಿಸಿ ಮೆಚ್ಚಿಸುತೆಚ್ಚರದಿ
ತುಚ್ಚ ವಿಷಯಗಳ ಇಚ್ಚಿಸದೆ ಯ
ದೃಚ್ಛಾಲಾಭದಿಂ ಪ್ರೋಚ್ಚನಾಗುವುದೆ ‖ 2 ‖

ಮನೋವಾಕ್ಕಾಯದನುಭವಿಸುವ ದಿನ
ದಿನದಿ ವಿಷಯ ಸಾಧನಗಳಿಗೂ
ಅನಿಶಾಂತರ್ಗತ ವನರುಹದಳ ಲೋ
ಚನಗರ್ಪಿಸಿ ದಾಸನು ನಾನೆಂಬುದೇ ‖ 3 ‖

ವಾಸವ ಮುಖ ವಿಬುಧಾಸುರ ನಿಚಯಕೆ
ವಾಸುದೇವನೆ ಶುಭಾಶುಭದ
ಈ ಸಮಸ್ತ ಜಗಕೀಶ ಕೇಶವಾ
ನೀಶ ಜೀವರೆಂಬ ಸುಜ್ಞಾನವೆ ‖ 4 ‖

ಪಂಚ ಭೇದಯುತ ಪ್ರಪಂಚವು ಸತ್ಯ ವಿ
ರಿಂಚಿ ಭವ ಮುಖ ಬಲಿ ವಂಚಕಗೆ
ಸಂಚಲ ಪ್ರತಿಮೆ ಅಚಂಚಲ ಪ್ರಕೃತಿಯು
ಸಂಚಿಂತಿಸಿ ಮುದ ಲಾಂಭಿತನಹುದೆ ‖ 5 ‖

ಪಂಚ ಋತುಗಳಲಿ ಪಂಚಾಗ್ನಿಗಳಲಿ
ಪಂಚ ಪಂಚರೂಪವ ತಿಳಿದು
ಪಂಚ ಸುಸಂಸ್ಕಾರಾಂಚಿತನಾಗಿ ದ್ವಿ
ಪಂಚ ಕರಣದಲಿ ಪಂಚಕನರಿವುದೆ ‖ 6 ‖

ಹೃದಯದಿ ರೂಪವು ವದನದಿ ನಾಮವು
ಉದರದಿ ನೈವೇದ್ಯವು ಶಿರದಿ
ಪದ ಜಲ ನಿರ್ಮಾಲ್ಯವನೆ ಧರಿಸಿ ಕೋ
ವಿದರ ಸದನ ಹೆಗ್ಗದವ ಕಾಯುವುದೆ ‖ 7 ‖

ಪಾತ್ರರ ಸಂಗಡ ಯಾತ್ರೆ ಚರಿಸುತ ವಿ
ಧಾತೃ ಪಿತನ ಗುಣ ಸ್ತೋತ್ರಗಳಾ
ಶ್ರೋತ್ರದಿ ಸವಿದು ವಿಚಿತ್ರಾನಂದದಿ
ಗಾತ್ರವ ಮರೆದು ಪರತ್ರವ ಪಡೆವುದೆ ‖ 8 ‖

ಹಂಸ ಮೊದಲು ಹದಿನೆಂಟು ರೂಪಗಳ
ಸಂಸ್ಥಾನವ ತಿಳಿದನುದಿನದಿ

ಸಂಸೇವಿಸುವ ಮಹಾಪುರುಷರ ಪದ
ಪಾಂಸುವ ಧರಿಸಿ ಅಸಂಶಯನಪ್ಪುದೆ || 9 ||

ವರ ಗಾಯಿತ್ರೀ ನಾಮಕ ಹರಿಗೀ
ರೆರಡಂಘ್ರಿಗಳ ವಿವರವ ತಿಳಿದು
ತರುವಾಯದಿ ಷಡ್ವಿಧ ರೂಪವ ಸಾ
ದರದಲಿ ಅನುದಿನ ಧ್ಯಾನಿಸುತಿಪ್ಪುದೆ || 10 ||

ಬಿಗಿದ ಕಂಠದಿಂ ದೃಗ್ಬಾಷ್ಪಗಳಿಂ
ನಗೆ ಮೊಗದಿಂ ರೋಮಗಳೊಗೆದು
ಮಿಗೆ ಸಂತೋಷದಿಂ ನೆಗೆದಾಡುತ ನಾ
ಲ್ಮೊಗನಯ್ಯನ ಗುಣ ಪೊಗಳಿ ಹಿಗ್ಗುವುದೆ || 11 ||

ಗೃಹಕರ್ಮವ ಬ್ಯಾಸರದಲೆ ಪರಮೋ
ತ್ಸಹದಲಿ ಮಾಡುತ ಮೂಜಗದ
ಮಹಿತನ ಸೇವೆ ಇದೆ ಎನುತಲಿ ಮೋದದಿ
ಅಹರಹರ್ಮನದಿ ಸಮರ್ಪಿಸುತಿಪ್ಪುದೆ || 12 ||

ಕ್ಲೇಶಾನಂದಗಳೀಶಾಧೀನ ಸ
ಮಾಸಮ ಬ್ರಹ್ಮ ಸದಾಶಿವರೂ
ಈಶಿತವ್ಯರು ಪರೇಶನಲ್ಲದೆ
ಶ್ವಾಸ ಬಿಡುವ ಶಕ್ತಿ ಲೇಸಿಲ್ಲೆಂಬುದೆ || 13 ||

ಏಕೋತ್ತರ ಪಂಚಾಶದ್ವರ್ಣಗ
ಳೇಕಾತ್ಮನ ನಾಮಂಗಳಿವು
ಮಾಕಮಾಲಾಸನ ಮೊದಲದಮರರು
ಸಾಕಲ್ಯದಿಯಿವರರಿಯರೆಂಬುದೆ || 14 ||

ಒಂದು ರೂಪದೊಳನಂತ ರೂಪವು
ಪೊಂದಿಪ್ಪವು ಗುಣಗಳಾ ಸಹಿತ
ಹಿಂದೆ ಇಂದು ಮುಂದೆಂದಿಗು ಗೋ
ವಿಂದಗೆ ಸರಿಮಿಗಿಲಿಲ್ಲೆಂತೆಂಬುದೆ || 15 ||

ಮೇದಿನಿ ಪರಮಾಣಂಬು ಕಣಂಗಳ
ನೈದಬಹುದು ಪರಿಗಣನೆಯನು
ಮಾಧವನಾನಂದಾದಿ ಗುಣಂಗಳ
ನಾದಿ ಕಾಲದಲಿ ಅಗಣಿತವೆಂಬುದೆ || 16 ||

ಹರಿಕಥೆ ಪರಮಾದರದಲಿ ಕೇಳುತ
ಮರೆದು ತನುವ ಸುಖ ಸುರಿವುತಲೀ
ಉರುಗಾಯನ ಸಂದರುಶನ ಹಾರೈ
ಸಿರುಳು ಹಗಲು ಜರಿ ಜರಿದು ಬಾಳ್ವುದೆ || 17 ||

ಆ ಪರಮಾತ್ಮಗೆ ರೂಪದ್ವಯವು ಪ
ರಾಪರ ತತ್ತ್ವಗಳಿದರೊಳಗೆ
ಸ್ತ್ರೀ ಪುಂ ಭೇದದಿ ಈ ಪದ್ಮಜಾಂಡವ
ವ್ಯಾಪಿಸಿಹನೆಂದೀಪರಿ ತಿಳಿವುದೆ || 18 ||

ವಿಷಯೇಂದ್ರಿಯಗಳಲಿ ತದಭಿಮಾನಿ ಸುಮ
ನಸರೊಳು ನಿಂದು ನಿಯಾಮಿಸುತಾ
ಶ್ವಸನಾಂತರ್ಗತ ವಾಸುದೇವ ತಾ
ವಿಷಯಂಗಳ ಭೋಗಿಸುವನೆಂದರಿವುದೆ || 19 ||

ಮೂಜಗದೊಳಗಿಹ ಭೂ ಜಲ ಖೇಚರ
ಈ ಜೀವರೊಳೊ ಮಹೌಜಸನ
ಸೋಜಿಗ ಬಹುವಿಧ ನೈಜ ವಿಭೂತಿಯ
ಪೂಜಿಸುತನುದಿನ ರಾಜಿಸುತಿಪ್ಪುದೆ || 20 ||

ಗುಣಕಾಲಾಹ್ವಯ ಆಗಮಾರ್ಣವ ಕುಂ
ಭಿಣಿ ಪರಮಾಣ್ವಾಂಬುಧಿಗಳಲಿ
ವನಗಿರಿ ನದಿ ಮೊದಲಾದದರೊಳಗಿಂ
ಧನಗತ ಪಾವಕನಂತಿಹನೆಂಬುದೆ || 21 ||

ಅನಳಾಂಗಾರನೊಳಿದ್ದೋಪಾದಿಯ
ಲನಿರುದ್ಧನು ಚೇತನರೊಳಗೆ
ಕ್ಷಣ ಬಿಟ್ಟಗಲದೆ ಏಕೋ ನಾರಾ
ಯಣ ಶ್ರುತಿ ಪ್ರತಿಪಾದ್ಯನು ಇಹನೆಂಬುದೆ || 22 ||

ಪಕ್ಷಗಳಕ್ಷಿಗಳಗಲದಲಿಪ್ಪಂ
ತ್ಯಕ್ಷರ ಪುರುಷನಪೇಕ್ಷೆಯಲಿ
ಕುಕ್ಷಿಯೊಳಬ್ಜಜ ತ್ರ್ಯಕ್ಷಾದ್ಯಮರರ
ಈಕ್ಷಿಸಿ ಕರುಣದಿ ರಕ್ಷಿಪನೆಂಬುದೆ || 23 ||

ಕಾರಣ ಕಾರ್ಯಾಂತರ್ಗತ ಅಂಶವ
ತಾರಾವೇಶಾಹಿತ ಸಹಜಾ
ಪ್ರೇರಕ ಪ್ರೇರ್ಯಾಂಹ್ವಯ ಸರ್ವತ್ರ ವಿ
ಕಾರವಿಲ್ಲದಲೆ ತೋರುವನೆಂಬುದೆ || 24 ||

ಪ್ರತಿದಿವಸ ಶ್ರುತಿಸ್ಮೃತಿಗಳಿಂದ ಸಂ
ಸ್ತುತಿಸುತ ಲಕ್ಷ್ಮೀ ಪತಿಗುಣವ
ಕೃತಿಪತಿ ಸೃಷ್ಟಿ ಸ್ಥಿತಿಲಯ ಕಾರಣ
ಇತರ ಸರ್ವ ದೇವತೆಗಳಿಗಿನಿತಿಲ್ಲೆಂಬುದೆ || 25 ||

ಪವನ ಮತಾನುಗರವ ನಾನಹುದೆಂ
ದವನಿಯೊಳಗೆ ಸತ್ಕವಿ ಜನರ
ಭವನಂಗಳಲಿ ಸಂಚರಿಸುತ ಸುಕಥಾ
ಶ್ರವಣವ ಮಾಡುತ ಪ್ರವರನಾಗುವುದೆ || 26 ||

ಪನ್ನಗಾಚಲ ಸನ್ನಿವಾಸ ಪಾ
ವನ್ನಚರಿತ ಸದ್ಗುಣಭರಿತಾ
ಜನ್ಯಜನಕ ಲಾವಣ್ಯೈಕನಿಧಿ ಜ
ಗನ್ನಾಥವಿಠಲಾನಾನ್ಯಪನೆಂಬುದೆ || 27 ||